ದೊರೆತ ನಂತರ ನಿರ್ಮಾಣ ಕಾರ್ಯದ ಬಗ್ಗೆ ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು

ವಿದ್ಯುತ್ ಸಂಪರ್ಕಗಳಿಗೆ ಅರ್ಜಿಗಳ ಸ್ವೀಕಾರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 151(83)

ಸದಸ್ಯರ ಹೆಸರು ಶ್ರೀ ಸದಾನಂದಗೌಡ ಡಿ ವಿ (ಪುತ್ತೂರು)

ಉತ್ತರಿಸುವ ಸಚಿವರು ಶ್ರೀ ವೀರಕುಮಾರ್ ಆ ಪಾಟೀಲ್(ಇಂಧನ ರಾಜ್ಯ ಸಚಿವರು)

ಪ್ರಶ್ನೆ

ಅ) ಕಳೆದ ಮೂರು ವರ್ಷಗಳಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ ಐಪಿ ಸೆಟ್ ವಿಭಾಗಗಳಲ್ಲಿ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ ಎಷ್ಟು ವರ್ಷವಾರು ಮಾಹಿತಿ ನೀಡುವುದು

ಆ) ಅವುಗಳ ವೈಕಿ ಎಷ್ಟು ಅರ್ಜಿದಾರರಿಗೆ ಸಂಪರ್ಕಗಳನ್ನು ಒದಗಿಸಲಾಗಿದೆ ಮತ್ತು ಉಳಿದ ಅರ್ಜಿದಾರರಿಗೆ ಸಂಪರ್ಕಗಳನ್ನು ಎಂದು ನೀಡಲಾಗುವುದು?

ಇ) ರಾಜ್ಯದಲ್ಲಿ ಕಾರ್ಯದೇಶವಾಗಿ ಸಾಮಗ್ರಿಗಳ ಲಭ್ಯತೆ ಇಲ್ಲದೆ ಸಂವರ್ಕ ಒದಗಿಸಲಾಗದೇ ಇರುವ ಒಟ್ಟು ಪ್ರಕರಣಗಳೆಷ್ಟು ವಿಭಾಗವಾರು ಬಾಕಿ ಅರ್ಜಿಗಳೆಷ್ಟು ವಿವರ ನೀಡುವುದು (ವಿಭಾಗವಾರು ಅಂದರೆ ಐಪಿ ಸೆಟ್ಟು ಗ್ರಹ ಕೈಗಾರಿಕೆ ಹೀಗೆ ವಿವರ ನೀಡುವುದು?

ಉತ್ತರ

ಅ) ಕಳೆದ ಮೂರು ವರ್ಷಗಳಲ್ಲಿ ಐ ಪಿ ಸೆಟ್ಟುಗಳ ವಿದ್ಯುತ್ ಸಂವರ್ಕಕ್ಕಾಗಿ ಕೋರಿ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ 1,84,415 ಇವುಗಳ ವರ್ಷವಾರು ಮಾಹಿತಿ ಈ ಕೆಳಕಂಡಂತಿದೆ

ವರ್ಷ	ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ
1998-1999	55245
1999-2000	65397

2000-2001 63773

ಆ) ಕಳೆದ ಮೂರು ವರ್ಷಗಳಲ್ಲಿ ವಿದ್ಯುತ್ ಸಂಪರ್ಕ ಕೋರಿ ಸ್ವೀಕರಿಸಿದ ಅರ್ಜಿಗಳ ಪೈಕಿ 1,38,710 ಅರ್ಜಿದಾರರ ಐ ಪಿ ಸೆಟ್ಟುಗಳಿಗೆ ಸಂಪರ್ಕ ಒದಗಿಸಲಾಗಿದೆ ಅವುಗಳ ವರ್ಷವಾರು ಮಾಹಿತಿ ಈ ಕೆಳಕಂಡಂತಿದೆ

ವರ್ಷ	ವಿದ್ಯುತ್ ಸಂಪರ್ಕ ನೀಡಿದ ಅರ್ಜಿದಾರರ ಸಂಖ್ಯೆ
1998-1999	38729
1999-2000	47239
2000-2001	52742

ನಿಗಮವು ಪ್ರತಿ ವರ್ಷ ತನ್ನ ಆರ್ಥಿಕ ಲಭ್ಯತೆ ವಿದ್ಯುತ್ ಸಂಪರ್ಕ ಕಲ್ಪಿಸಲು ಬೇಕಾದ ಸಾಮಗ್ರಿಗಳ ಲಭ್ಯತೆ ಹಾಗೂ ಪ್ರತಿ ಜಿಲ್ಲೆಯಲ್ಲಿ ಸ್ವೀಕೃತಗೊಂಡ ಅರ್ಜಿಗಳ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಪ್ರತಿ ಜಿಲ್ಲೆಗೆ ವಾರ್ಷಿಕ ಗುರಿಯನ್ನು ನಿಗಧಿಪಡಿಸುತ್ತದೆ ಈ ನಿಗಧಿಪಡಿಸಿದ ಗುರಿಯನ್ನು ಗಮನದಲ್ಲಿಟ್ಟುಕೊಂಡು ಆದ್ಯತಾ ಪಟ್ಟಿಗನುಸಾರವಾಗಿ ಐ ಪಿ ಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲಾಗುತ್ತಿದೆ

ಇ) ನಿಗಮವು ವಿದ್ಯುತ್ ಸಂಪರ್ಕ ಕೋರಿ ಬಂದ ಅರ್ಜಿಗಳಿಗೆ ಸಾಧ್ಯವಾದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯುತ್ ಸಂವರ್ಕ ನೀಡಲು ಶ್ರಮಿಸುತ್ತಿದೆ ಉದಾಹರಣೆಗಾಗಿ 1998-99ರಲ್ಲಿ 45,000 ಐ ಪಿ ಸೆಟ್ಟುಗಳ ವಿದ್ಯುದೀಕರಣಕ್ಕಾಗಿ ಗುರಿ ನಿಗಧಿಪಡಿಸಿದ್ದರೂ ಸಹಾ 58901 ಐ ಪಿ ಸೆಟ್ಟುಗಳಿಗೆ 1999-2000ರಲ್ಲಿ 28,480 ಐ ಪಿ ಸೆಟ್ಟುಗಳ ವಿದ್ಯುದೀಕರಣ ಗುರಿಗೆ ಬದಲಾಗಿ 39,532 ಐ ಪಿ ಸೆಟ್ಟುಗಳಿಗೆ ಹಾಗೂ 2000-01ರಲ್ಲಿ ನಿಗಧಿಪಡಿಸಿದ್ದ 35,875 ಐ ಪಿ ಸೆಟ್ಟುಗಳ ಗುರಿಗೆ ಬದಲಾಗಿ 81,345 ಐ ಪಿ ಸೆಟ್ಟುಗಳಿಗೆ ವಿದ್ಯುತ್ ಸಂವರ್ಕ ನೀಡಲಾಗಿದೆ ಆದಾಗ್ಯೂ ಕಾರಣಾಂತರಗಳಿಂದ 31-3-2001ರ ಅಂತ್ಯಕ್ಕೆ ಈ ಕೆಳಗೆ ಮಾಹಿತಿ ನೀಡಿರುವ ವಿಭಾಗವಾರು ಅರ್ಜಿದಾರರಿಗೆ ವಿದ್ಯುತ್ ಸಂವರ್ಕ ನೀಡಲು ಬಾಕಿ ಉಳಿದಿರುತ್ತದೆ

	ಐ ಪಿ ಸೆಟ್ಟು	ಗೃಹ	ಕೈಗಾರಿಕೆ
ಬಾಕಿ ಇರುವ ಅರ್ಜಿಗಳ ಸಂಖ್ಯೆ	43939	21002	1116